ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY

ಯರಗೇರಾ–584133, ರಾಯಚೂರು, ಕರ್ನಾಟಕ ರಾಜ್ಯ, ಭಾರತ

https://raichuruniversity.ac.in ವಿದ್ಯಾಮಂಡಲ ವಿಭಾಗ registrarrur@gmail.com

ಕ್ರ.ಸಂ. ರಾವಿರಾ/ವಿದ್ಯಾಮಂಡಲ/2022–23/ 1687 ದಿನಾಂಕ: 25.01.2023

**ಸುತ್ತೋಲೆ**

ರಾಯಚೂರು ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ರಾಯಚೂರು ಮತ್ತು ಯಾದಗಿರಿ ಜಿಲ್ಲೆಯ ಪದವಿ ಕಾಲೇಜುಗಳ ಪ್ರಾಂಶುಪಾಲರಿಗೆ ಈ ಮೂಲಕ ಸೂಚಿಸುವುದೇನೆಂದರೆ, 2022–23ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕ ಪ್ರಥಮ ಸೆಮಿಸ್ಟರ್‌ನಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ಕೋರ್ಸುಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಯುಯುಸಿಎಂಎಸ್ (UUCMS) ತಂತ್ರಾಂಶದಲ್ಲಿ ವಿಷಯ ಆಯ್ಕೆಯ ಪ್ರಕ್ರಿಯೆಯನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಈ ಕೆಳಕಾಣಿಸಿದ ಮಾರ್ಗಸೂಚಿಗಳನ್ನು ಪಾಲಿಸಬೇಕಾಗುತ್ತದೆ.

1) ಪ್ರಥಮ ಸೆಮಿಸ್ಟರ್ ಪ್ರವೇಶವನ್ನು ಪಡೆದಿರುವ ವಿದ್ಯಾರ್ಥಿಗಳು DSC-1, DSC-2, DSE-1, L-1, L-2, AECC, SEC ವಿಷಯಗಳು ಇರುತ್ತವೆ.
2) ಮೇಲಿನ ವಿಷಯಗಳಲ್ಲಿ DSC-1, DSC-2, ಮತ್ತು AECC, SEC ಕಡ್ಡಾಯದ ವಿಷಯವಾಗಿರುತ್ತವೆ.
3) ಉಳಿದ ವಿಷಯಗಳಾದ DSE-1, L-1, L-2, ಆಯ್ಕೆಯ ವಿಷಯಗಳಾಗಿರುತ್ತವೆ. ಸದರಿ ಆಯ್ಕೆಯ ವಿಷಯಗಳನ್ನು **ದಿನಾಂಕ: 05.02.2023ರೊಳಗೆ** ಮಾಡುವುದು.
4) ಕೋರ್ಸು ರೆಜಿಸ್ಟ್ರೇಶನ್ ಮಾಡುವುದಕ್ಕಿಂತ ಮೊದಲು ವಿದ್ಯಾರ್ಥಿಗಳ ವಿಷಯಗಳ ಆಯ್ಕೆಯು ಖಚಿತವಾಗಿರಬೇಕು ಹಾಗೂ ವಿದ್ಯಾರ್ಥಿಗಳ ಕೋರ್ಸು ರೆಜಿಸ್ಟ್ರೇಶನ್ ಆದ ನಂತರ ವಿಷಯಗಳ ಆಯ್ಕೆಯ ಪ್ರಕ್ರಿಯೆಗೆ ಅವಕಾಶವಿರುವುದಿಲ್ಲ. ತದನಂತರದಲ್ಲಿ ವಿಷಯ ಬದಲಾವಣೆಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯಕ್ಕೆ ಮನವಿಯನ್ನು ಸಲ್ಲಿಸಿದರೆ ವಿಶ್ವವಿದ್ಯಾಲಯವು ಅದನ್ನು ಪರಿಗಣಿಸುವುದಿಲ್ಲ.
5) ಪ್ರವೇಶ ಪತ್ರದಲ್ಲಿ ಇರುವಂತಹ/ಕೋರ್ಸು ರೆಜಿಸ್ಟ್ರೇಶನ್ ಮಾಡಿರುವಂತಹ ವಿಷಯಗಳಲ್ಲಿಯೇ ಪರೀಕ್ಷೆಗಳನ್ನು ವಿದ್ಯಾರ್ಥಿಗಳು ಬರೆಯತಕ್ಕದ್ದು. ಮುಂದುವರೆದು ಪರೀಕ್ಷೆಗಳನ್ನು ಬರೆಯುವ ಸಂದರ್ಭದಲ್ಲಿ ವಿದ್ಯಾರ್ಥಿಗಳು ವಿಷಯಗಳ ಬದಲಾವಣೆಯನ್ನು ಮಾಡಿಕೊಂಡು ಪರೀಕ್ಷೆಗಳನ್ನು ಬರೆಸುವುದು ಈ ಸಾಲಿನಲ್ಲಿ ಆಸ್ಪದವಿರುವುದಿಲ್ಲ. ಕಾರಣ ವಿದ್ಯಾರ್ಥಿಗಳ ಕೋರ್ಸುಗಳ ರೆಜಿಸ್ಟ್ರೇಶನ್ ಮಾಡಿಕೊಳ್ಳುವಾಗ ಪ್ರಾಂಶುಪಾಲರು ಅತ್ಯಂತ ಜಾಗರೂಕತೆಯಿಂದ ವಿಶ್ವವಿದ್ಯಾಲಯಕ್ಕೆ ಅನುಮೋದನೆ (Approval) ಮಾಡಿ ಕಳುಹಿಸಬೇಕಾಗಿ ಸೂಚಿಸಲಾಗಿದೆ.
6) ಕಾರಣ ಮೇಲಿನ ಎಲ್ಲಾ ಮಾರ್ಗಸೂಚಿಗಳನ್ನು ಗಮನದಲ್ಲಿಟ್ಟುಕೊಂಡು ವಿದ್ಯಾರ್ಥಿಗಳ ವಿಷಯಗಳ ಆಯ್ಕೆಯು ಕಾರ್ಯವನ್ನು ಪೂರ್ಣಗೊಳಿಸಿದ ಕೋರ್ಸು ರೆಜಿಸ್ಟ್ರೇಶನ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿಕೊಂಡು ವಿದ್ಯಾರ್ಥಿಗಳ ವಿಷಯವಾರು ಪಟ್ಟಿಯನ್ನು ಈ ಕಚೇರಿಗೆ ಸಲ್ಲಿಸಲು ಸೂಚಿಸಲಾಗಿದೆ. ಒಂದು ಪ್ರತಿಯನ್ನು ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವುದು.

ಮೇಲಿನ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವುದರ ಮೂಲಕ ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಪರೀಕ್ಷಾ ಕಾರ್ಯಗಳು ಸುಗಮವಾಗಿ ನಡೆಯುವಂತೆ ಸೂಚಿಸಲಾಗಿದೆ.

25/1/23

(ಪ್ರೊ. ವಿಶ್ವನಾಥ ಎಂ.,)
ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

ಗೆ,
ರಾಯಚೂರು ವಿಶ್ವವಿದ್ಯಾಲಯದ ಅಧೀನಕ್ಕೆ ಒಳಪಟ್ಟ ರಾಯಚೂರು ಮತ್ತು ಯಾದಗಿರಿ ಜಿಲ್ಲೆಯ ಎಲ್ಲಾ ಪದವಿ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

ಪ್ರತಿಗಳು:
1. ಕುಲಸಚಿವರು (ಮೌಲ್ಯಮಾಪನ), ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
2. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು/ ಕುಲಸಚಿವರ ಆಪ್ತ ಸಹಾಯಕರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
3. ಕಚೇರಿ ಪ್ರತಿ.